ಹುಬ್ಬಳ್ಳಿ ಧಾರವಾಡ ಸ್ಮಾರ್ಟ್‌ಸಿಟಿ ಲಿಮಿಟೆಡ್
HUBBALLI DHARWAD SMART CITY LIMITED
Special Purpose Vehicle for Implimentation of Smart City Project
(Registered Company No. CIN : U74999KA2017 PLC 101265)

ನಂ. ಎಚ್‌ಡಿಎಸ್‌ಸಿಎಲ್/ಮಗಾಮಾಸಮೀಕ್ಷೆ/2019-20 ದಿನಾಂಕ: 09-08-2019

ಗೆ,
**ಸಹಾಯಕ ಆಯುಕ್ತರು, ವಲಯ ಕಚೇರಿ-09**
**ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ,**
**ಹುಬ್ಬಳ್ಳಿ**

**ಮಾನ್ಯರೇ,**

**ವಿಷಯ** : ಮಹಾತ್ಮಾಗಾಂಧೀ ಮಾರುಕಟ್ಟೆ ದುರ್ಗದ ಬೈಲ್, ಹುಬ್ಬಳ್ಳಿ ಉದ್ದೇಶಿತ ಕಟ್ಟಡದಲ್ಲಿ 4ನೇ ಮಹಡಿಯಲ್ಲಿ ಲಭ್ಯವಾಗುವ ಒಟ್ಟು 8 ಅಂಗಡಿಗಳ ವಿಸ್ತೀರ್ಣ 3966 ಚ.ಮೀ. ಹಾಗೂ 5ನೇ ಮಹಡಿಯಲ್ಲಿ ಒಟ್ಟು 08 ಅಂಗಡಿಗಳ ವಿಸ್ತೀರ್ಣ 3966 ಚ.ಮೀ ಸುಸಜ್ಜಿತ ಲಭ್ಯವಾಗುವ ಜಾಗೆಯಲ್ಲಿ ವ್ಯಾಪಾರ, ಶೈಕ್ಷಣಿಕ ಚಟುವಟಿಕೆ ಹಾಗೂ ಖಾಸಗಿ ಸಂಸ್ಥೆಗಳ ಕಚೇರಿಯನ್ನು ಸ್ಥಾಪಿಸಲು ಭಾಡಿಗೆ ಆಧಾರದ ಮೇಲೆ ಪಡೆಯಲು ಅರ್ಹ ಅರ್ಜಿದಾರರಿಂದ ನೊಂದಾಯಿಸಲು ಬೇಡಿಕೆ ಸಮೀಕ್ಷೆಯಲ್ಲಿ ಅರ್ಜಿ ಆಹ್ವಾನಿಸಿದ ಕುರಿತು

* * * * *

ಹುಬ್ಬಳ್ಳಿ-ಧಾರವಾಡ ಸ್ಮಾರ್ಟಸಿಟಿ ಯೋಜನೆಯಲ್ಲಿ ಮಹಾತ್ಮಾಗಾಂಧಿ ಮಾರುಕಟ್ಟೆಯ ಕಟ್ಟಡದ ಪ್ರದೇಶದಲ್ಲಿ ನೂತನ ವಿನ್ಯಾಸದೊಂದಿಗೆ ಮಾರುಕಟ್ಟೆಯನ್ನು ಅಭಿವೃದ್ದಿಪಡಿಸಲಾಗುತ್ತಿದೆ. ಸದರಿ ಪ್ರದೇಶದಲ್ಲಿ ಉತ್ತಮ ಗುಣಮಟ್ಟದ ಸುಸಜ್ಜಿತ ತರಕಾರಿ ಮಾರುಕಟ್ಟೆ ಹಾಗೂ ಉತ್ತಮ ಸ್ಥಳಾವಕಾಶ ಇರುವ ಕಟ್ಟಡವನ್ನು ಮರು ವಿನ್ಯಾಸದೊಂದಿಗೆ ವ್ಯವಸ್ಥಿತವಾಗಿ ಕೆಳಮಹಡಿಯಲ್ಲಿ ವಾಹನ ನಿಲುಗಡೆ. ನೆಲ ಮಹಡಿಯಲ್ಲಿ ತರಕಾರಿ ಮಾರುಕಟ್ಟೆ, ಮೊದಲನೇ ಮಹಡಿ, 2ನೇ ಮಹಡಿ ಹಾಗೂ 3ನೇ ಮಹಡಿಯಲ್ಲಿ ವ್ಯಾಪಾರದ ಮಳಿಗೆ ಹಾಗೂ ನಾಲ್ಕು ಮತ್ತು ಐದನೇ ಮಹಡಿಯಲ್ಲಿ ಉತ್ತಮ ಸುಸಜ್ಜಿತ ವಿಶಾಲವಾದ ಸ್ಥಳಾವಕಾಶ ಲಭ್ಯವಾಗುವ ಜಾಗೆಯಲ್ಲಿ ಉತ್ತಮ ನೂತನ ವಿನ್ಯಾಸದ ಕಟ್ಟಡವನ್ನು ನಿರ್ಮಿಸಲಾಗುತ್ತಿದೆ. ಸದರಿ ವಿಷಯವನ್ನು ದಿ: 07-08-2019 ರಂದು ಜರುಗಿದ ಕೆಯುಐಡಿಎಫ್‌ಸಿ ತಾಂತ್ರಿಕ ಸಮಿತಿಯಲ್ಲಿ ಪರಿಕಲ್ಪನೆ ಪ್ರಸ್ತಾವನೆಯನ್ನು ಪರಿಶೀಲಿಸಿದ್ದು, ತಾಂತ್ರಿಕ ಸಮಿತಿಯ ಸಲಹೆಯಂತೆ ಬೇಡಿಕೆ ಸಮೀಕ್ಷೆಯನ್ನು ಕೈಕೊಳ್ಳಲಾಗುತ್ತದೆ.

ಪ್ರಸ್ತುತ ನೆಲ ಮಹಡಿಯಲ್ಲಿ ತರಕಾರಿ ಮಾರುಕಟ್ಟೆ, ಮೊದಲನೇ ಮಹಡಿ, 2ನೇ ಮಹಡಿ ಹಾಗೂ 3ನೇ ಮಹಡಿಯಲ್ಲಿ ವ್ಯಾಪಾರದ ಮಳಿಗೆಗೆ ಕಾಯ್ದಿರಿಸಲಾಗಿದೆ. 4ನೇ ಮಹಡಿಯಲ್ಲಿ ಲಭ್ಯವಾಗುವ 3966 ಚ.ಮೀ. ಜಾಗೆಯಲ್ಲಿ ಅಂದಾಜು 08 ಮಳಿಗೆಗಳಲ್ಲಿ 02 ಮಳಿಗೆ 265 ಚ.ಮೀ, 02 ಮಳಿಗೆ 566.07 ಚ.ಮೀ, 02 ಮಳಿಗೆ 516 ಚ.ಮೀ ಹಾಗೂ 02 ಮಳಿಗೆ 250 ಚ.ಮೀ ಲಭ್ಯವಿರುವವು ಮತ್ತು 5ನೇ ಮಹಡಿಯಲ್ಲಿ 3966 ಚ.ಮೀ. ಜಾಗೆಯಲ್ಲಿ (ನಕ್ಷೆಯಲ್ಲಿ ತೋರಿಸಿದಂತೆ) ಅಂದಾಜು 08 ಮಳಿಗೆಗಳಲ್ಲಿ 02 ಮಳಿಗೆ 265 ಚ.ಮೀ, 02 ಮಳಿಗೆ 566.07 ಚ.ಮೀ, 02 ಮಳಿಗೆ 516 ಚ.ಮೀ ಹಾಗೂ 02 ಮಳಿಗೆ 250 ಚ.ಮೀ ಲಭ್ಯವಿರುವುದು. ಉದ್ದೇಶಿತ ಸ್ಥಳದಲ್ಲಿ ಸಾರ್ವಜನಿಕರಿಗೆ ಸೂಕ್ತ ವ್ಯಾಪಾರ, ಶೈಕ್ಷಣಿಕ ಚಟುವಟಿಕೆ, ಕಾರ್ಪೋರೇಟ್ ಸಂಸ್ಥೆ, ಬ್ಯಾಂಕುಗಳಿಗೆ ಮತ್ತು ಇತರ ವ್ಯಾಪಾರ ಕೈಗೊಳ್ಳಲು ಅವಕಾಶವಿರುತ್ತದೆ. ಕಾರಣ ಲಭ್ಯವಾಗುವ ಸ್ಥಳವನ್ನು ಸಾರ್ವಜನಿಕರ ಬೇಡಿಕೆ ಮತ್ತು ಚಟುವಟಿಕೆಗೆ ಅನುಸಾರ, ಪೌರಾಡಳಿತ ನಿರ್ದೇಶನಾಲಯದ ಮಾರುಕಟ್ಟೆಯ ನಿಯಮಾವಳಿಯಂತೆ ಸ್ಥಳಾವಕಾಶವನ್ನು ಹಂಚಿಕೆ ಮಾಡಿ ಬಾಡಿಗೆಯನ್ನು ಆಕರಿಸಿ ಒದಗಿಸುವುದಾಗಿದೆ. ಕಾರಣ ಬೇಡಿಕೆ ಸಮೀಕ್ಷೆಯಲ್ಲಿ ಸಾರ್ವಜನಿಕರು ನಿಯೋಜಿತ 4ನೇ ಮಹಡಿ ಹಾಗೂ 5ನೇ ಮಹಡಿ ಕಟ್ಟಡದಲ್ಲಿ ಲಭ್ಯವಾಗುವ ಸ್ಥಳಕ್ಕೆ ಬೇಡಿಕೆ ಪತ್ರವನ್ನು ನಿಗದಿತ ನಮೂನೆಯ ಅರ್ಜಿಯೊಂದಿಗೆ ಭರಣಾ ಮಾಡಿ ಆಯುಕ್ತರುಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ, ಇವರ ಹೆಸರಿನಲ್ಲಿ ರೂ. 500/- ಗಳ ಡಿಡಿಯೊಂದಿಗೆ ಅರ್ಜಿಯನ್ನು ದಿ: 16-08-2019 ರ ಒಳಗಾಗಿ ಮದ್ಯಾಹ್ನ 3 ಘಂಟೆಯ ಒಳಗಾಗಿ ವಲಯ ಕಚೇರಿ 09 ಇಂದಿರಾ ಗಾಜಿನ ಮನೆ ಆವರಣ ಇವರಿಗೆ ಸಲ್ಲಿಸಲು ಕೋರಲಾಗಿದೆ. ಸದರಿ ಪ್ರಕಟಣೆಯ ಪ್ರತಿಯನ್ನು ಈ ಪತ್ರದೊಂದಿಗೆ ಲಗತ್ತಿಸಿದ್ದು ಸೂಕ್ತ ಮಾಹಿತಿಗಾಗಿ ಸಲ್ಲಿಸಿದೆ. ವಲಯ ಕಚೇರಿಯಿಂದ ಒಬ್ಬ ಸಿಬ್ಬಂಧಿಯನ್ನು ನಿಯೋಜಿಸಿ ಅರ್ಜಿಯನ್ನು ಪೂರೈಸಲು ಮತ್ತು ಅರ್ಜಿಗಳನ್ನು ಪಡೆಯಲು ವ್ಯವಸ್ಥೆ ಮಾಡುವುದು, ಸ್ವೀಕರಿಸಿದ ಅರ್ಜಿಗಳನ್ನು ಮಾಹಿತಿಯನ್ನು ತಯಾರಿಸಿ ದಿನಾಂಕ : 16/08/2019 ಸಂಜೆ 4:00 ಗಂಟೆ ಒಳಗಾಗಿ ಈ ಕಚೇರಿಗೆ ಮಾಹಿತಿಯನ್ನು ಸಲ್ಲಿಸುವುದು.

ತಮ್ಮ ವಿಶ್ವಾಸಿ,

ವ್ಯವಸ್ಥಾಪಕ ನಿರ್ದೇಶಕರು
ಹುಬ್ಬಳ್ಳಿ-ಧಾರವಾಡ ಸ್ಮಾರ್ಟಸಿಟಿ ಲಿಮಿಟೆಡ್,
ಹುಬ್ಬಳ್ಳಿ

ನೊಂದಾಯಿತ ಕಚೇರಿ : 4ನೇ ಮಹಡಿ, 'ಎಫ್' ಬ್ಲಾಕ್, ಐಟಿ ಪಾರ್ಕ, ಹುಬ್ಬಳ್ಳಿ ಕರ್ನಾಟಕ ರಾಜ್ಯ ಭಾರತ.
Regd Office : 4th Floor, 'F' Block, IT Park, HUBBALLI - 580 020, Karnataka State, India.
Ph : 0836-2355322, Fax : 0836-2355331, Control Room Assistance : 2213888/2213898,
Website : wwwhubballidharwadsmartcity.com E-mail : smartcityhubballidharwad@gmail.com

# ಅರ್ಜಿ ನಮೂನೆ

**ಮಹಾತ್ಮಾಗಾಂಧೀ ಮಾರುಕಟ್ಟೆ ದುರ್ಗದ ಬೈಲ್, ಹುಬ್ಬಳ್ಳಿ ಕಟ್ಟಡದಲ್ಲಿ 4ನೇ ಮತ್ತು 5ನೇ ಮಹಡಿಯಲ್ಲಿ ಲಭ್ಯವಾಗುವ ವ್ಯಾಪಾರದ ಮಳಿಗೆ ಮತ್ತು ಖಾಲಿ ಪ್ರದೇಶವನ್ನು ವ್ಯಾಪಾರ, ಶೈಕ್ಷಣಿಕ ಚಟುವಟಿಕೆ ಹಾಗೂ ಖಾಸಗಿ ಸಂಸ್ಥೆಗಳ ಕಚೇರಿಯನ್ನು ಸ್ಥಾಪಿಸಲು ಬಾಡಿಗೆ ಆಧಾರದ ಮೇಲೆ ಹಂಚಿಕೆ ಮಾಡಲು ನಾಗರೀಕ/ವ್ಯಾಪಾರಸ್ಥರು/ಸಂಸ್ಥೆಗಳಿಂದ ಬೇಡಿಕೆ ಸಮೀಕ್ಷೆ**

| | | |
|---|---|---|
| 1 | ಅರ್ಜಿದಾರರ ಹೆಸರು ಹಾಗೂ ವಿಳಾಸ | : |
| 2 | ಅರ್ಜಿದಾರರ ದೂರವಾಣಿ ಸಂಪರ್ಕ ಸಂಖ್ಯೆ | : |
| 3 | ಅರ್ಜಿದಾರರು ಸ್ಥಾಪಿಸಬಯಸುವ/ಕೈಕೊಳ್ಳುವ ಚಟುವಟಿಕೆ | : |
| 4 | ಅವಶ್ಯಕತೆ ಇರುವ ಸ್ಥಳಾವಕಾಶ ಚ.ಮೀ ಗಳಲ್ಲಿ | : |
| 5 | ಈಗಾಗಲೇ ಕಾರ್ಯನಿರ್ವಹಿಸುತ್ತಿರುವ/ಕೈಕೊಂಡ ಚಟುವಟಿಕೆಯ ಪ್ರದೇಶ ಹಾಗೂ ಸ್ಥಳ | : |
| 6 | ಬೇಕಾಗುವ ಸ್ಥಳದ ಅವಧಿ | : |
| 7 | ಲಗತ್ತಿಸಿದ ಡಿಡಿ ಸಂಖ್ಯೆ, ದಿನಾಂಕ ಹಾಗೂ ಬ್ಯಾಂಕಿನ ಹೆಸರು | : |
| 8 | ಇತರ ಮಾಹಿತಿ ಇದ್ದಲ್ಲಿ | : |

ಈ ಮೇಲ್ಕಂಡ ವಿಷಯವನ್ನು ನನಗೆ ಅವಶ್ಯಕತೆಗೆ ಅನುಗುಣವಾಗಿ ಬೇಡಿಕೆಯನ್ನು ಆಧರಿಸಿ ಮಾಹಿತಿಯನ್ನು ಪೂರೈಸಿರುತ್ತೇನೆ. ನಾನು ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಯಿಂದ ವಿಧಿಸುವ ಶರತ್ತುಗಳಿಗೆ ಬದ್ಧನಿರುತ್ತೇನೆ ಎಂದು ಈ ಮೂಲಕ ಪ್ರಮಾಣಿಕರಿಸಿ ಅರ್ಜಿ ಸಲ್ಲಿಸಿರುತ್ತೇನೆ.

ಅರ್ಜಿದಾರರ ಸಹಿ

---

## ವಲಯ ಕಚೇರಿಯಿಂದ ಸ್ವೀಕೃತಿ

ಶ್ರೀ/ಶ್ರೀಮತಿ____________________ ಸಾ|| __________ ಇವರಿಂದ ಈ

ದಿನ ____________ ಅರ್ಜಿಯನ್ನು ರೂ. 500/- ಗಳ ಡಿಡಿಯೊಂದಿಗೆ ಸ್ವೀಕರಿಸಲಾಗಿದೆ.

ಸ್ವೀಕರಿಸಿದವರ ಹೆಸರು ಹಾಗೂ ಸಹಿ

ಕಚೇರಿಯ ಶೀಲ್‌ನೊಂದಿಗೆ